**- 5 -**

**ಸಿ.ಸಿ. ಸಂಖ್ಯೆ 5559 / 2023**
**ಪಿ.ಡಬ್ಲೂ -01**

**ದಿನಾಂಕಃ 04.10.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ವಾಟೀ ಸವಾಲು ಃ- ಶ್ರೀ PMM ಆರೋಪಿ ಪರ ವಕೀಲರಿಂದ .**

ಆರೋಪಿಯು ಎಷ್ಟು ವರ್ಷಗಳಿಂದ ಪರಿಚಯ ಎಂದರೆ ಸಾಕ್ಷಿ 5-6 ವರ್ಷಗಳಿಂದ ಎಂದು ನುಡಿಯುತ್ತಾರೆ. ಆರೋಪಿಯು ನಿಮಗೆ ಹೇಗೆ ಪರಿಚಯ ಎಂದರೆ ಸಾಕ್ಷಿ ಕಾವ್ಯ ಪರ್ಫ್ಯೂಮ್ ಹಾಗೂ ತೇಜೂ ಮಸಾಲ ಏಜೆನ್ಸಿ ಮಾಡುತ್ತಿದ್ದೆನು ಆಗ ಆರೊಪಿಯು ಹಳ್ಳಿ ಮಸಾಲ ಮಾರಾಟ ಮಾಡುತ್ತಿದ್ದರು, ಹಾಗಾಗಿ ಪರಿಚಯವಾಗಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಕಾವ್ಯ ಫರ್ಪೂಮ್ ಹಾಗೂ ತೇಜೂ ಮಸಾಲ ಏಜೆನ್ಸಿ ಎಲ್ಲಿ ಇದೆ ಎಂದರೆ ಸಾಕ್ಷಿ ಕಾಳಿಕಾಂಭ ದೇವಸ್ಥಾನ ರಸ್ತೆ ಮಾಗಡಿಯಲ್ಲಿ ಎಂದು ನುಡಿಯುತ್ತಾರೆ. ಆರೋಪಿಯ ಹಳ್ಳಿ ಮಸಾಲ ಎಲ್ಲಿ ಇದೆ ಎಂದರೆ ಸಾಕ್ಷಿ ಹೋಯ್ಸಳ ನಗರದಲ್ಲಿ ಎಂದು ನುಡಿಯುತ್ತಾರೆ. ಪೂರ್ಣ ವಿಳಾಸ ನಿಮಗೆ ಗೊತ್ತಿರುವುದಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಆರೋಪಿಯು ನಿಮ್ಮ ಬಳಿ ಯಾವಾಗ ಹಣವನ್ನು ಕೇಳಿರುತ್ತಾರೆ ಎಂದರೆ ಸಾಕ್ಷಿ ನಾನು ದಿನಾಂಕ 10.02.2023 ರಂದು ಹಣವನ್ನು ಕೊಟ್ಟಿದ್ದು ಅದಕ್ಕೂ ಒಂದು ವಾರಗಳ ಮೊದಲು ಬಂದು ಕೇಳಿದ್ದರು ಎಂದು ನುಡಿಯುತ್ತಾರೆ. ದಿನಾಂಕ 10.02.2023 ರಂದು ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆ ಎಂದು ಕಾನೂನು ತಿಳುವಳಿಕೆಯಲ್ಲಿ , ಪಿರ್ಯಾದಿಯಲ್ಲಿ ಹಾಗೂ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಸದರಿ ದಿನಾಂಕ 10.02.2023 ರಂದು ಆರೋಪಿಗೆ ಹಣವನ್ನು ಕೊಟ್ಟಿರುವುದಿಲ್ಲ ಆ ಕಾರಣದಿಂದ ದಿನಾಂಕವನ್ನು ಬರೆಸಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ಆರೋಪಿಯು ಹಣವನ್ನು ಕೇಳಲು ಎಲ್ಲಿಗೆ ಬಂದಿದ್ದರು ಎಂದರೆ ಸಾಕ್ಷಿ ನನ್ನ ಮನೆಗೆ ಎಂದು ನುಡಿಯುತ್ತಾರೆ. ಯಾರು ಯಾರು ಬಂದಿದ್ದರು ಎಂದರೆ ಸಾಕ್ಷಿ ಆರೋಪಿ ಒಬ್ಬರೇ ಬಂದಿದ್ದರು ಎಂದು ನುಡಿಯುತ್ತಾರೆ. ಎಷ್ಟು ಭಾರಿ ಬಂದಿದ್ದರು ಎಂದರೆ ಸಾಕ್ಷಿ 2 ಭಾರಿ ಬಂದಿದ್ದರು ಎಂದು ನುಡಿಯುತ್ತಾರೆ. ನೀವು ಹಣ ಕೊಟ್ಟ ದಿನದಂದು ಆರೋಪಿಯಿಂದ ಏನಾದರೂ ದಾಖಲೆ ಬರೆಸಿಕೊಂಡಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ರೂ.1,50,000/- ಹಣ ಇತ್ತು ಎಂಬುದರ ಬಗ್ಗೆ ನಿಮ್ಮ ಬಳಿ ಏನಾದರೂ ದಾಖಲಾತಿ ಇದೆಯೆ ಎಂದರೆ ಸಾಕ್ಷಿ ಇತ್ತು ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ಆಗುತ್ತದೆಯೆ ಎಂದರೆ ಸಾಕ್ಷಿ ಕೊಡಲು ಆಗುವುದಿಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಹೆಸರಿನಲ್ಲಿ ಎಷ್ಟು ಖಾತೆಗಳು ಇವೆ ಎಂದರೆ ಸಾಕ್ಷಿ 3 ಬ್ಯಾಂಕಿನಲ್ಲಿ ಖಾತೆ ಇವೆ ಎಂದು ನುಡಿಯುತ್ತಾರೆ. ಸದರಿ 3 ಬ್ಯಾಂಕಿನ ಖಾತೆಯ ಸ್ಟೇಟ್ ಮೆಂಟ್ ಹಾಜರು ಪಡಿಸಬಹುದೆ ಎಂದರೆ ಸಾಕ್ಷಿ ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಸದರಿ 3 ಖಾತೆಗಳಲ್ಲಿ ಈಗ ಬ್ಯಾಂಕ್ ಆಫ್ ಬರೋಡ ಖಾತೆ ಮಾತ್ರ ಚಾಲ್ತಿಯಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ನೀವು ಆದಾಯ ತೆರಿಗೆ ಪಾವತಿ ಮಾಡುತ್ತೀರಾ ಎಂದರೆ ಸಾಕ್ಷಿ ಮಾಡುತ್ತೇನೆ ಎಂದು ನುಡಿಯುತ್ತಾರೆ. ಸದರಿ ಆದಾಯ ತೆರಿಗೆ ಪಾವತಿಯಲ್ಲಿ ಸಾಲ ಕೊಟ್ಟ ಬಗ್ಗೆ ತೋರಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆರೋಪಿಯು ರೂ. 1,50,000/- ಹಣ ಕೊಡಬೇಕು ಎಂದು ತೆರಿಗೆ ಪಾವತಿಯಲ್ಲಿ ತೋರಿಸಲು ನಿಮಗೆ ತೊಂದರೆ ಇದ್ದಿರಲಿಲ್ಲವಾ ಎಂದರೆ ಸಾಕ್ಷಿ ತೊಂದರೆ ಇದ್ದಿರಲಿಲ್ಲ ಎಂದು ನುಡಿಯುತ್ತಾರೆ. ನೀವು ಆರೋಪಿಗೆ ಯಾವುದೇ ಹಣ ಕೊಡದೇ ಇರುವುದರಿಂದ ನೀವು ತೆರಿಗೆ ಪಾವತಿಯಲ್ಲಿ ತೋರಿಸಿರುವುದಿಲ್ಲ ಎಂದರೆ ಸಾಕ್ಷಿ ನಾನು ಆರೋಪಿಗೆ ಹಣ ಕೊಟ್ಟಿರುವುದು ಸತ್ಯ ಎಂದು ನುಡಿಯುತ್ತಾರೆ.

ನೀವು ಯಾವ ದಿನಾಂಕದಂದು ಆರೋಪಿಗೆ ಹಣ ಕೊಟ್ಟಿರುತ್ತೀರಿ ಎಂದು ನಿಮ್ಮ ಫಿರ್ಯಾದಿಯಲ್ಲಿ ಮತ್ತು ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು

ಎಂದು ನುಡಿಯುತ್ತಾರೆ. ಅದೇ ರೀತಿ ನೀವು ಯಾವ ರೀತಿ ಆರೋಪಿಗೆ ಹಣವನ್ನು ಕೊಟ್ಟಿರುತ್ತೀರಿ ಎಂದು ಸಹ ಪಿರ್ಯಾದಿಯಲ್ಲಿ, ಕಾನೂನು ತಿಳುವಳಿಕೆಯಲ್ಲಿ ಹಾಗೂ ಮುಖ್ಯ ವಿಚಾರಣೆ ಪ್ರಮಾಣಪತ್ರದಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅದೇ ರೀತಿ ಆರೋಪಿಯು ಎಷ್ಟು ದಿನಗಳ ಒಳಗೆ ಕೊಡುತ್ತೇನೆ ಎಂದು ಹೇಳಿದ್ದರು ಎಂದೂ ಸಹ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೀವು ಆರೋಪಿಗೆ ಯಾವುದೇ ಹಣವನ್ನು ಕೊಟ್ಟಿರುವುದಿಲ್ಲ ಆ ಕಾರಣದಿಂದಲೇ ದಿನಾಂಕ ಮತ್ತು ಯಾವ ರೀತಿ ಹಣವನ್ನು ಕೊಟ್ಟಿರುತ್ತೀರಿ ಎಂದು ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಹಣ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ.

ಮನೆ ನಂ.148, 20ನೇ ಕ್ರಾಸ್ , ಎಂ ಆರ್ ಸಿ ಆರ್ ಲೇಔಟ್ , ಮಾರುತಿ ಮಂದಿರ , ವಿಜಯನಗರ , ಬೆಂಗಳೂರಿನಲ್ಲಿ ನಿಮ್ಮ ಮನೆ ಇದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವಿಳಾಸಕ್ಕೆ ಯಾವುದೇ ನೋಟೀಸ್ ಹಾಗೂ ಇತರೆ ಪಾರ್ಸಲ್ ಗಳು ಬಂದರೆ ನಿಮಗೆ ತಲುಪುತ್ತವೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ದಿನಾಂಕ 01.12.2023 ರಂದು ಆರೋಪಿಯು ನಿಮಗೆ ಒಂದು ನೋಟೀಸನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ನನಗೆ ತಲುಪಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮಗನ ಹೆಸರು ಸುನಿಲ್ ಎಸ್ ಎಂ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಈ ಚೆಕ್ಕಿನ ಹಣದ ಸಂಬಂಧ ನೀವು ಮಾಗಡಿ ಪೋಲಿಸ್ ಠಾಣೆಯಲ್ಲಿ ದೂರನ್ನು ಕೊಟ್ಟಿದ್ದಿರಿ ಎಂದರೆ ಸಾಕ್ಷಿ ಈ ಚೆಕ್ಕಿನ ಹಣದ ಸಂಬಂಧ ಕೊಟಿಟರುವುದಿಲ್ಲ ಹಿಂದಿನ ವ್ಯವಹಾರದ ಸಂಬಂಧ ಕೊಟ್ಟಿದ್ದೆನು ಆಗ ಸದರಿ ವ್ಯವಹಾರಗಳ ಹಣವನ್ನು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹಿಂದಿನ ವ್ಯವಹಾರ ಎಂದರೆ ಎಷ್ಟು ವರ್ಷಗಳ ಹಿಂದಿನ ವ್ಯವಹಾರ ಎಂದರೆ ಸಾಕ್ಷಿ ಜ್ಞಾಪನ ಇರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯೊಂದಿಗೆ ಎಷ್ಟು ಭಾರಿ ವ್ಯವಹಾರ ಮಾಡಿರುತ್ತೀರಿ ಎಂದರೆ ಸಾಕ್ಷಿ ಈ ಹಿಂದೆ ರೂ. 1,50,000/- ಹಣವನ್ನು ಬೇರೆಯವರ ಬಳಿ ಪಡೆದು ಕೊಟ್ಟಿದ್ದೆನು ಸದರಿ ಹಣವನ್ನು ಆರೋಪಿಯು ಚೆಕ್ ಮುಖಾಂತರ ಕೊಟ್ಟಿರುತ್ತಾರೆ ಹಾಗೂ ಚಿಲ್ಲರೆ ವ್ಯವಹಾರವನ್ನು ಮಾಡಿದ್ದೆನು, ಸದರಿ

ಹಣವನ್ನೂ ಸಹ ಕೊಟ್ಟಿದ್ದು ಪ್ರಸ್ತುತ ಚೆಕ್ಕಿನ ಹಣವನ್ನು ಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. ಯಾರ ಬಳಿ ಹಣವನ್ನು ಪಡೆದು ಕೊಟ್ಟಿರುತ್ತೀರಿ ಎಂದರೆ ಸಾಕ್ಷಿ ವೇಣುಗೋಪಲ್ ರವರಿಂದ ಪಡೆದು ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವೇಣುಗೋಪಾಲ್ ರವರಿಂದ ಹಣವನ್ನು ಕೊಡಿಸಿದ್ದು ನೀವು ನೇರವಾಗಿ ಹಣವನ್ನು ಕೊಟ್ಟಿರುವುದಿಲ್ಲವಾ ಎಂದರೆ ಸಾಕ್ಷಿ ಸದರಿ ವೇಣುಗೋಪಾಲ್ ರರಿಂದ ನಾನು ಹಣ ಪಡೆದು ಆರೋಪಿಗೆ ಕೊಟ್ಟಿರುತ್ತೇ ಎಂದು ನುಡಿಯುತ್ತಾರೆ. ಸದರಿ ವ್ಯವಹಾರಕ್ಕೆ ಸಂಬಂಧಪಟ್ಟಂತೆ ವೇಣುಗೋಪಾಲ್ ರವರನ್ನು ಕರೆಸಿ ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿ ಅ ವರು ಬರುವುದಿಲ್ಲ ಎಂದು ನುಡಿಯುತ್ತಾರೆ. ನೀವು ವೇಣುಗೋಪಾಲ್ ವರಿಂದ ಯಾವುಕಿದೇ ಹಣವನ್ನು ಕೊಡಿಸಿರುವುದಿಲ್ಲ ಸುಳ್ಳು ಹೇಳುತ್ತಿದ್ದೀರಿಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೋರಿದ್ದರಿಂದ, ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ನ್ಯಾ . ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**